**ಹೆಚ್ಚುವರಿ ಸಿಜೆ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ.ನಂ.513/2009**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಕೀರ್ತಿಪ್ರಸಾದ್ | ಪಿ.ಡಬ್ಲ್ಯೂ-2 |
| ತಂದೆಯ ಹೆಸರು | ಃ | ಲೇ.ಮರಿಯಯ್ಯ | ಸಿ.ಡಬ್ಲ್ಯೂ-8 |
| ವಯಸ್ಸು | ಃ | 63 ವರ್ಷ | 299 ಸಿಆರ್‌ಪಿಸಿ ರಡಿಯಲ್ಲಿ ಸಾಕ್ಷಿ ವಿಚಾರಣೆ. |
| ಉದ್ಯೋಗ | ಃ | ನಿವೃತ್ತ ಎಎಸ್‌ಐ ಸರಗೂರು | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 18-01–2018. |
| ವಾಸಸ್ಥಳ | ಃ | ಕೆ ಆರ್ ನಗರ | |

**ಮುಖ್ಯ ವಿಚಾರಣೆ ಃ ಎಪಿಪಿ ರವರಿಂದಃ**

ನಾನು 2008 ರಿಂದ 2012ರವರೆಗೂ ಸರಗೂರು ಪೋಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ23-6-2009ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಚಾಸ 1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿದ ಮೇರೆಗೆ ಅದನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆಃ129ಃ2009ರಂತೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-7, ಸಾಕ್ಷಿ ಸಹಿಯನ್ನು ನಿಪಿ-7ಎ ಎಂದು ಗುರುತಿಸಲಾಯಿತು. ನಂತರ ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದರ ಮೇರೆಗೆ ಅದನ್ನು ನಿಪಿ-8, ಸಾಕ್ಷಿ ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ನಂತರ ಅದೇದಿನ ಘಟನಾ ಸ್ಥಳಕ್ಕೆ ಹೋಗಿ ಮ 12-30 ಗಂಟೆಯಿಂದ 1–30 ಗಂಟೆಯತನಕ ಮಹಜರ್ ಕ್ರಮ ಜರುಗಿಸಿರುತ್ತೇನೆ. ಘಟನಾ ಸ್ಥಳ ವನ್ನು ಪಿರ್ಯಾದಿದಾರರು ಮತ್ತು ಪಂಚಾಯಿತಿದಾರರು ತೋರಿಸಿರುತ್ತಾರೆ. ಸದರಿ ಮಹಜರ್ ಕ್ರಮವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-9, ಸಾಕ್ಷಿ ಸಹಿಯನ್ನು ನಿಪಿ-9ಎ ಎಂದು ಗುರುತಿಸಲಾಯಿತು. ಮಹಜರ್ ಕ್ರಮವನ್ನು ಜರುಗಿಸುವ ಸಂದರ್ಭದಲ್ಲಿ ವಾಹನದ ಸಂಖ್ಯೆಃಕೆಎ-02-ಎಂಎ-6591 ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ವಶಪಡಿಸಿಕೊಂಡಂತಹ ಕಾರನ್ನು ನಮ್ಮ ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ.

**ನಂತರ ಸಾಕ್ಷಿದಾರರಾದ ಚಾಸ 6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಚಾಸ 9 ರವರಿಗೆ ನಿವೇದಿಸಿಕೊಂಡಿರುತ್ತೇನೆ.**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿಜೆ ಮತ್ತು ಜೆ.ಎಂ.ಎಫ್.ಸಿ,**
**ಹೆಚ್.ಡಿ.ಕೋಟೆ.**

–